ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,

ಹೊಸ ಸಾರ್ವಜನಿಕ ಕಚೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ: ಸಿ3(7) ಪ್ರಾಶಾಶಿ-ವರ್ಗ-07/2017-18 ದಿನಾಂಕ: 24-02-2018

: ಜ್ಞಾಪನ :

ವಿಷಯ:- 2017-18ನೇ ಸಾಲಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ ವೃಂದದ ಶಿಕ್ಷಕರುಗಳಿಗೆ ಕಡ್ಡಾಯ ವರ್ಗಾವಣೆ ಮಾಡಲು ಕ್ರಮವಹಿಸುವ ಬಗ್ಗೆ:

ಉಲ್ಲೇಖ:-1) ಕರ್ನಾಟಕ ಸಿವಿಲ್ ಸೇವೆಗಳು(ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ ಸಂಖ್ಯೆ: ಇಡಿ 12 ಇಟಿಆರ್ 2017 ದಿನಾಂಕ: 29/11/2017.

2) ಪ್ರಾಥಮಿಕ ಶಾಲಾ ಶಿಕ್ಷಕರ ವರ್ಗಾವಣಾ ಮಾರ್ಗಸೂಚಿ ಸಂಖ್ಯೆ: ಸಿ3(7) ಪ್ರಾಶಾಶಿ-ವರ್ಗ-07/2017-18 ದಿನಾಂಕ: 29/12/2017. ಮತ್ತು 09/02/2018

3) ಪ್ರೌಢ ಶಾಲಾ ಶಿಕ್ಷಕರ ವರ್ಗಾವಣಾ ಮಾರ್ಗಸೂಚಿ ಸಂಖ್ಯೆ: ಸಿ4(7) ಪ್ರೌಶಿ-ವರ್ಗ-29/2017-18 ದಿನಾಂಕ: 01/01/2018. ಮತ್ತು 09/02/2018

-----*****-----

2017-18 ನೇ ಸಾಲಿನ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ವರ್ಗಾವಣಾ ಮಾರ್ಗಸೂಚಿ ಸಹಿತ ವೇಳಾಪಟ್ಟಿಯಲ್ಲಿ, ವರ್ಗಾವಣಾ ಪ್ರಾಧಿಕಾರಿಗಳು ಕಾಲದಿಂದ ಕಾಲಕ್ಕೆ ಹಮ್ಮಿಕೊಳ್ಳಬೇಕಾದ ಕಾರ್ಯಗಳ ಬಗ್ಗೆ ಸೂಚನೆಗಳನ್ನು ನೀಡಲಾಗಿದೆ. ವೇಳಾಪಟ್ಟಿಯಂತೆ, ಈಗಾಗಲೇ ಕಡ್ಡಾಯ ವರ್ಗಾವಣೆಗಳಿಗೆ ಸಂಬಂಧಪಟ್ಟ ಶಿಕ್ಷಕರ ಪಟ್ಟಿಯನ್ನು ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಿದೆ.

ಮುಂದುವರೆದು, ಸ್ವೀಕೃತವಾಗಿರುವ ಆಕ್ಷೇಪಣೆಗಳ ಕುರಿತು ಮೊದಲನೇಯ ಹಂತದಲ್ಲಿ ಕ್ಷೇತ್ರಶಿಕ್ಷಣಾಧಿಕಾರಿಗಳು ನಿಯಮಾನುಸಾರ ಪರಿಶೀಲಿಸಿ ಅವರ ಲಾಗ್‌ಇನ್ ಮೂಲಕ ಹಾಗೂ ಮುಂದಿನ ಹಂತದಲ್ಲಿ ಉಪನಿರ್ದೇಶಕರ ತಮ್ಮ ಲಾಗ್‌ಇನ್ ಮೂಲಕ ಶಿಕ್ಷಕರ ಮಾಹಿತಿ ದತ್ತಾಂಶದಲ್ಲಿ (ಟಿಡಿಎಸ್) ತಿದ್ದುಪಡಿಗಳನ್ನು ಅನುಮೋದಿಸಲು ತ್ವರಿತವಾಗಿ ಕ್ರಮಕೈಗೊಳ್ಳತಕ್ಕದ್ದು. ಸದರಿ ತಿದ್ದುಪಡಿಗಳ ಆಧಾರದಲ್ಲಿ ವಿಷಯದನ್ವಯದ ಅಂತಿಮ ಪಟ್ಟಿಯನ್ನು ವರ್ಗಾವಣಾ ತಂತ್ರಾಂಶದಲ್ಲಿ ಜನರೇಟ್ ಮಾಡಿ ಜಿಲ್ಲೆಗಳಿಗೆ ಆಯಾ ದಿನಾಂಕದಲ್ಲಿ ಒದಗಿಸಲಾಗುತ್ತದೆ.

ಕಡ್ಡಾಯ ವರ್ಗಾವಣೆಗಳಿಗೆ ಸಂಬಂಧಪಟ್ಟಂತೆ, ಎಲ್ಲ ಹಂತದಲ್ಲಿ ವರ್ಗಾವಣಾ ತಂತ್ರಾಂಶದಲ್ಲಿನ ತಾಂತ್ರಿಕ ಕ್ರಮಗಳನ್ನು ಕೈಗೊಳ್ಳಲು ಶಿಕ್ಷಕರ ಮಾಹಿತಿಗಳನ್ನು ಶಿಕ್ಷಕರ ದತ್ತಾಂಶ (ಟಿಡಿಎಸ್)ದಿಂದಲೇ ಸೆಳೆಯಲಾಗುವುದರಿಂದ ಆಕ್ಷೇಪಣೆಗಳ ಕುರಿತಾದಂತೆ ಶಿಕ್ಷಕರ ದತ್ತಾಂಶದಲ್ಲಿಯೇ ತಿದ್ದುಪಡಿಗೊಳಿಸಬೇಕಾಗಿದೆ ಎಂಬುದನ್ನು ಮತ್ತೊಮ್ಮೆ ಸ್ಪಷ್ಟಪಡಿಸಿದೆ. ಈ ಬಗ್ಗೆ ವ್ಯಾಪ್ತಿಯ ಕ್ಷೇತ್ರಶಿಕ್ಷಣಾಧಿಕಾರಿಗಳು ಮತ್ತು ಶಿಕ್ಷಕರಿಗೆ ಅಗತ್ಯ ಸೂಚನೆಗಳನ್ನು ಹೊರಡಿಸತಕ್ಕದ್ದು ಹಾಗು ತಾಂತ್ರಿಕ ಸಹಕಾರಕ್ಕೆ ಈ ಕಛೇರಿಯ ಇ-ಆಡಳಿತ ವಿಭಾಗವನ್ನು ದೂರವಾಣಿ ಮುಖಾಂತರ ಅಗತ್ಯ ಸಂದರ್ಭಗಳಲ್ಲಿ ಸಂಪರ್ಕಿಸತಕ್ಕದ್ದು.

ಉಳಿದಂತೆ ಎಲ್ಲ ಸೂಚನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ನಿರ್ದೇಶಕರು
ಪ್ರೌಢ ಶಿಕ್ಷಣ

ನಿರ್ದೇಶಕರು
ಪ್ರಾಥಮಿಕ ಶಿಕ್ಷಣ

ಇವರಿಗೆ,

1. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ವಿಭಾಗೀಯ ಸಹ ನಿರ್ದೇಶಕರು ಬೆಂಗಳೂರು/ಮೈಸೂರು ವಿಭಾಗ.
2. ಅಪರ ಆಯುಕ್ತರು, ಕಲಬುರ್ಗಿ/ಧಾರವಾಡದ ಸಹನಿರ್ದೇಶಕರು, ಅಪರ ಆಯುಕ್ತರ ಕಛೇರಿ ಧಾರವಾಡ ಗುಲ್ಬರ್ಗ.
3. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಮುಂದಿನ ಕ್ರಮಕ್ಕಾಗಿ
4. ಕ್ಷೇತ್ರಶಿಕ್ಷಣಾಧಿಕಾರಿಯವರಿಗೆ (ಉಪನಿರ್ದೇಶಕರ ಮುಖಾಂತರ)
5. ಹಿರಿಯ ಸಹಾಯಕ ನಿರ್ದೇಶಕರು/ಸಹಾಯಕ ನಿರ್ದೇಶಕರು ಇ-ಆಡಳಿತ ಶಾಖೆ. ಆಯುಕ್ತರ ಕಛೇರಿ. ಬೆಂಗಳೂರು, ಈ ಕುರಿತಂತೆ ಅಗತ್ಯ ತಾಂತ್ರಿಕ ಕ್ರಮಗಳನ್ನು ಕೈಗೊಳ್ಳಲು ತಿಳಿಸಿ.
6. ಶ್ರೀ ಶಿವಕುಮಾರ್. ಹಿರಿಯ ಪ್ರೋಗ್ರಾಮರ್, ಇ-ಆಡಳಿತ ಶಾಖೆ ಹಾಗು ತಂಡ. ಆಯುಕ್ತರ ಕಛೇರಿ. ಬೆಂಗಳೂರು
7. ಕಛೇರಿ ಪ್ರತಿ.

ಪ್ರತಿ : 1) ಅಪರ ನಿರ್ದೇಶಕರು, ಆಯುಕ್ತರ ಕಛೇರಿ, ಬೆಂಗಳೂರು

2) ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳಿಗೆ, ಈ ಕುರಿತಂತೆ ಮಾನ್ಯ ಆಯುಕ್ತರ ಗಮನಕ್ಕೆ ತರಲು ತಿಳಿಸಿ